# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ನಂಜನಗೂಡು

**ಕ್ರಿ. ಮಿಸಿಲೆ.ನಂ** 42-2017 **ಆರ್ . ಡಬ್ಲುಃ** 1

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಿವಕುಮಾರಿ.ಎನ್<br>ನಂಜನಗೂಡು |
| | **ಸತ್ಯ ಪ್ರತಿಜ್ಞೆಯ** ಮೇರೆಗೆ **ದಿನಾಂಕ** 05-04-2019. |

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಎಂ.ಎಂ. ರವರಿಂದಃ**

ಎದುರುದಾರರು ನನ್ನ ಹುಟ್ಟಿನಿಂದಲೂ ನನಗೆ ಪರಿಚಿತರಿರುತ್ತಾರೆ. ಎದುರುದಾರರ ತಾಯಿ ನನ್ನ ಅಜ್ಜಿ. ನನ್ನ ತಾಯಿ ಎದುರುದಾರರ ತಾಯಿಗೆ ಮಗಳು ಎಂದರೆ ಸರಿ.

2. ನನ್ನ ತಂದೆ ತಾಯಿಗೆ ನಾನು ಸೇರಿ 4 ಜನ ಹೆಣ್ಣು ಮಕ್ಕಳು ಹಾಗೂ 1 ಗಂಡು ಮಗು ಇರುತ್ತವೆ. ಎದುರುದಾರರ ಸಹೋದರ ಮತ್ತು ಸಹೋದರಿಯರು ನನಗೆ ಗೊತ್ತು. ನನ್ನ ಸಹೋದರಿ ಗೀತಾಳನ್ನು ಎದುರುದಾರರ ಅಣ್ಣನಾದ ಚಂದ್ರಶೇಖರ್ ರವರಿಗೆ ವಿವಾಹ ಮಾಡಿಕೊಡಲಾಗಿದೆ ಎಂದರೆ ಸರಿ. ಮೇಲೆ ಹೇಳಿದ ನನ್ನ ಅಕ್ಕ ಭಾವ ಮದುವೆಯಾದಗಿನಿಂದಲೂ ಇಲ್ಲಿಯವರೆಗೂ ಯಾವುದೇ ವ್ಯಾಜ್ಯ ಇಲ್ಲದೆ ಸುಖವಾಗಿ ಸಂಸಾರ ನಡೆಸುತ್ತಿದ್ದಾರೆ ಎಂದರೆ ಸರಿ.

3. ಎದುರುದಾರರ ಅಣ್ಣ ಚಂದ್ರಶೇಖರ್ ಹಾಗೂ ಅವರ ಅಕ್ಕನ, ನನ್ನ ಅಜ್ಜಿಯ ಒತ್ತಾಸೆಯ ಮೇರೆಗೆ ನನ್ನ ವಿವಾಹ ಎದುರುದಾರರ ಜೊತೆ ನಡೆಯಿತು. ನಾನು ಎದುರುದಾರರ ಅಕ್ಕನ ಮಗಳಾಗಿದ್ದು ಆತನ ತಾಯಿ ನನ್ನ ಅಜ್ಜಿಯಾಗಿದ್ದು ನಾನು ಆತನ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂಬ ಸದುದ್ದೇಶದಿಂದ ಎದುರುದಾರರು ನನ್ನ ವಿವಾಹವಾಗಲು ಒಪ್ಪಿದ್ದರು ಎಂದರೆ ಸರಿ.

4.ಎದುರುದಾರರ ತಂದೆ ರಂಗಸ್ವಾಮಿ ನಾಯ್ಕ ರವರನ್ನು ನಾನು ನೋಡಿರುತ್ತೇನೆ ಎಂದರೆ ಸರಿ. ಎದುರುದಾರರ ತಂದೆ ಯಾವುದೇ ಉದ್ಯೋಗದಲ್ಲಿ ಇರಲಿಲ್ಲ ಎಂದರೆ ಸರಿ. ನಮ್ಮ ವಿವಾಹವಾಗುವ ಪೂರ್ವದಲ್ಲಿ ಎದುರುದಾರರ ತಂದಗೆ ಯಾವುದೇ ಸ್ವಂತ ಮನೆ, ಆಸ್ತಿ ಇರಲಿಲ್ಲ

ಎಂದರೆ ಸರಿಯಲ್ಲ. ಎದುರುದಾರರ ತಂದೆ ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದರು ಎಂದರೆ ಸರಿಯಲ್ಲ. ಎದುರುದಾರರ ತಂದೆಗೆ ಯಳಂದೂರಿನ ಸೊಪ್ಪಿನಕೇರಿ ಬೀದಿಯಲ್ಲಿ ಒಂದು ಮನೆ ಇತ್ತು. ಎದುರುದಾರರಿಗೆ ಇಬ್ಬರು ಸಹೋದರಿಯವರು ಹಾಗೂ ಮೂವರು ಸಹೋದರರು ಇರುತ್ತಾರೆ. ಎದುರುದಾರರನ್ನು ಹೊರತುಪಡಿಸಿ ಆತನ ಸಹೋದರರಾಗಲಿ, ಸಹೋದರಿಯರಾಗಲಿ ಸರ್ಕಾರಿ ನೌಕರಿಯಲ್ಲಿ ಇಲ್ಲ ಎಂದರೆ ಸರಿ. ಎದುರುದಾರರ ಸಹೋದರರು ಮಾಡುವ ಕೆಲಸದಿಂದ ಅವರು ಯಾವುದೇ ಆಸ್ತಿಯನ್ನು ಖರೀದಿ ಮಾಡಲು ಶಕ್ತರಲ್ಲ ಎಂದರೆ ಸರಿಯಲ್ಲ. ಎದುರುದಾರರಿಗಾಗಲಿ, ಆತನ ಕುಟುಂಬಸ್ಥರಿಗಾಗಲಿ ಯಾವುದೇ ಆದಾಯ ಬರುವ ಆಸ್ತಿಗಳು ಇಲ್ಲ ಎಂದರೆ ಸರಿಯಲ್ಲ. ಎದುರುದಾರರ ಕುಟುಂಬಕ್ಕೆ ಕುಂಬಾರ ಬೀದಿಯಲ್ಲಿ ತೋಟ ಇರುತ್ತದೆ. ಆ ರೀತಿ ತೋಟ ಇದೆ ಎಂದ ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಹಾಜರುಡಿಸಿಲ್ಲ ಎಂದರೆ ಸರಿ. ಅದನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಎದುರುದಾರರು ಸರ್ಕಾರಿ ನೌಕರಿಗೆ ಸೇರಿದ ನಂತರ ಇಡೀ ಕುಟುಂಬದ ಜವಾಬ್ದಾರಿ ಆತನ ಮೇಲೆ ಇದೆ ಎಂದರೆ ಸರಿಯಲ್ಲ.

5. ನೀವು ಆರೋಗ್ಯವಾಗಿ ಇದ್ದೀರಿ ಎಂದು ಕೇಳಿದ ಪ್ರಶ್ನೆಗೆ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನನಗೆ ಈಗ ಸ್ವಲ್ಪ ಎದೆ ನೋವು ಬಂದಿರುತ್ತದೆ. ಅದು ಈ ಹಿಂದೆಯೂ ಇತ್ತು. ನನಗೆ ಮೇಲೆ ಹೇಳಿದಂತೆ ಆರೋಗ್ಯ ಸಮಸ್ಯೆ ಇದ್ದು ವೈದ್ಯರಿಂದ ಚಿಕಿತ್ಸಗೆ ಪಡೆಯುತ್ತಿರುಬಗ್ಗೆ ನಾನು ಈಗಾಗಲೇ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ.

(ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯಾವಕಾಶವನ್ನು ಕೋಗಿದ್ದು ಸಮಯಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ.ನ್ಯಾದಂ. ನಂಜನಗೂಡು**